# ಪರಸ್ಪರ ಸಹಕಾರ

ಸ್ವರ್ಗ ಮತ್ತು ನರಕಗಳಿಗಿರುವ ವ್ಯತ್ಯಾಸವೇನು? ಒಬ್ಬ ವ್ಯಕ್ತಿ ಈ ವಿಷಯವನ್ನೆ ಆಳವಾಗಿ ಚಿಂತಿಸುತ್ತಿದ್ದ. ಒಂದು ದಿನ ರಾತ್ರಿ ಅವನು ಹೀಗೆ ಚಿಂತಿಸುತ್ತಿದ್ದಂತೆಯೇ ಅವನಿಗೆ ನಿದ್ರೆ ಬಂದುಬಿಟ್ಟಿತು. ಅವನಿಗೆ ಕನಸಿನಲ್ಲಿ ಸ್ವರ್ಗ-ನರಕಗಳ ದರ್ಶನವಾಯಿತು.

ಮೊದಲು ಅವನು ನರಕಕ್ಕೆ ಹೋಗುತ್ತಾನೆ. ಅಲ್ಲಿ ಒಂದು ವಿಚಿತ್ರ ದೃಶ್ಯ ಕಾಣಿಸಿತು. ಒಂದು ದೊಡ್ಡ, ಉದ್ದನೆಯ ಮೇಜು. ಅದರ ಮಧ್ಯಭಾಗದಲ್ಲಿ ಬಗೆ ಬಗೆಯ ಆಹಾರ ಪದಾರ್ಥಗಳಿವೆ. ಅದರ ಎರಡೂ ಬದಿಗಳಲ್ಲಿ ಜನರು ಕುಳಿತಿದ್ದಾರೆ. ಎಲ್ಲರೂ ಹಸಿವೆಯಿಂದ ನರಳುತ್ತಿದ್ದಾರೆ. ತಮ್ಮ ಮುಂದೆಯೇ ಅಷ್ಟೊಂದು ಆಹಾರವಿದ್ದರೂ ತಿನ್ನಲಾಗುತ್ತಿಲ್ಲ. ಏಕೆಂದರೆ ಉದ್ದನೆಯ ಸೌಟನ್ನು ಅವರ ಕೈಗಳಿಗೆ ಕಟ್ಟಲಾಗಿದೆ. ಅವರು ಕೈ ಮಡಿಸಲಾರರು ಹಾಗೂ ಆಹಾರವನ್ನು ಬಾಯಿಗೆ ಹಾಕಿಕೊಳ್ಳಲಾರರು. ಪಾಪ, ಅವರ ಸಂಕಟ ಹೇಳತೀರದು.

ಅನಂತರ ಆ ವ್ಯಕ್ತಿ ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲಿಯೂ ಅದೇ ದೃಶ್ಯ. ಆದರೆ ಎಲ್ಲರೂ ಆನಂದದಿಂದ ಇದ್ದಾರೆ. ಸಂತೋಷದ ಹೊಳೆ ಅಲ್ಲಿ ಹರಿಯುತ್ತಿದೆ. ಅದೇ ರೀತಿ ಉದ್ದನೆಯ ಸೌಟನ್ನು ಕಟ್ಟಲಾಗಿದೆ. ಇಲ್ಲಿ ವ್ಯತ್ಯಾಸವೇನೆಂದರೆ ವಿರುದ್ಧ ದಿಕ್ಕಿನಲ್ಲಿ ಕುಳಿತಿರುವ ವ್ಯಕ್ತಿಗಳು ಪರಸ್ಪರರಿಗೆ ಉಣಿಸುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಹೊಟ್ಟೆ ತುಂಬುವಂತಾಗಿದೆ, ಎಲ್ಲರೂ ಆನಂದದಿಂದ ಇದ್ದಾರೆ.

*ಹೀಗೆಯೇ ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಂತ ಸುಖವನ್ನು ಮಾತ್ರ ಚಿಂತಿಸಿದರೆ ಅದು ನರಕ. ಎಲ್ಲರೂ ಇತರರನ್ನು ಸಂತೋಷಪಡಿಸಲು ಪ್ರಯತ್ನಿಸಿದರೆ ಅದೇ ಸ್ವರ್ಗವಾಗುತ್ತದೆ.*

✳

